ಅದೇ ಸೆಡವಿನಲ್ಲಿ ಇಳಿದವನೇ ಸೀದಾ ಮನೆಯತ್ತ ಹೊರಟ. ಹೊನ್ನಟ್ಟಾಲಯ್ಯನೂ ಮೆಲ್ಲಗೆ ತಾನು ಕೂತಲ್ಲಿಂದ ಜಾರಿ ಇಳಿದು ಅವನ ಕೂಡೇ ಕಾಲಾಕಿದ.

## 3

ಎದ್ರೂ ಬಿದ್ರೂ ಸುಂದ್ರೇಶ ಮೇಷ್ಟರಿಗೆ ಅಂಟಿಕೊಂಡಿರುತ್ತಿದ್ದ ಶಂಭುಲಿಂಗ ಹಾಗೂ ಅವನ ಗೆಣೆಕಾರರ ಬಗ್ಗೆ ಅಡವಪ್ಪನಿಗೆ ಎಂಥದೋ ಗುಮಾನಿಯಿತ್ತು. ಅಂತೆಯೇ ಹುಡುಸ್ಲೇಗೌಡ ಮತ್ತವನ ಮಗ ವೀರಭದ್ರರಿಗೆ ಶಂಭುಲಿಂಗನ ಗುಂಪಿನ ಮೇಲೆ ಗುಮಾನಿಯ ಜೊತೆಗೆ ಮಾಮೇರಿ ಸಿಟ್ಟಿತ್ತು. ಯಾವಾಗ ಶಂಭುಲಿಂಗ ಮುಬೀನಾಳ ಬಗ್ಗೆ ಅಲ್ಲಲ್ಲೇ ಪಿಸಪಿಸ ಶುರುವಾದವೋ ವೀರಭದ್ರನಿಗೆ ಸೇಡುತೀರಿಸಿಕೊಳ್ಳಲು ಒಂದು ನೆವ ಸಿಕ್ಕಿತ್ತು. ಆವತ್ತೊಂದು ದಿನ ವೀರಭದ್ರನ ಗ್ಯಾಂಗು ಖುದ್ದು ಶಂಭುಲಿಂಗನನ್ನೇ ಅಟಕಾಯಿಸಿಕೊಂಡಿತ್ತು. 'ನೀನು ಆ ಸಾಬ್ರ ಹುಡ್ಗಿ ಜೊತೆ ಓಡಾಡಿದ್ರೆ ಗ್ರಾಚಾರ ನೆಟ್ಗಿರಲ್ಲ,' ಅಂತ ನೇರವಾಗಿ ಧಮಕಿ ಹಾಕಿದ್ದರು. 'ಅದುನ್ನೆಲ್ಲಾ ಕೇಳಾಕೆ ನೀನ್ಯಾರು ಪೋತ್ನಾಯ್ಕ?' ಶಂಭುಲಿಂಗನೂ ತಿರುಗೇಟು ನೀಡಿದ್ದ. 'ಹಿಂಗೇ ಮುಂದ್ವರ್ಸು ನಾವು ಯಾರೂಂತ ತೋರುಸ್ತೀವಿ ಆವಾಗ ಗೊತ್ತಾಗುತ್ತೆ. ನಿನ್ಗೆ ಜಾತಿ ಧರ್ಮ ಇಲ್ಲಾಂದ್ರೆ ಬ್ಯಾರೆವ್ರುಗೂ ಇಲ್ಲಾ ಅಂತ ತಿಳ್ಕಂಡಿದೀಯೇನು?' ಹುಡುಸ್ಲೇಗೌಡನ ಮಗ ವೀರಭದ್ರ ಉಚಾಯಿಸಿ ಮಾತನಾಡಿದ್ದ. 'ಆ ಅಂದ್ರೆ ಟೋ ಅನ್ನಾಕೆ

